**Witness duly sworn on 04.09.2021**

***Further Cross Examination of PW-15 by Sri.TPD Advocate for Accused:***

1. ಯಾವ ವಿಳಾಸಕ್ಕೆ ಡೆಲಿವರಿ ಇತ್ತು ಎಂದು ನಾನು ಪೋಲಿಸರ ಸಮಕ್ಷಮ ಹೇಳಿಕೆ ಕಾಲದಲ್ಲಿ ತಿಳಿಸಿಲ್ಲ. ನಾನು ನಿಂತಿದ್ದ ಸ್ಥಳಕ್ಕೆ ಹತ್ತಿರದಲ್ಲಿ 3 ಅಪಾರ್ಟ ಮೆಂಟ್ ಗಳು ಇದ್ದಿರಬಹುದು. ನಾನು ಇದ್ದ ಸ್ಥಳದಿಂದ ಘಟನೆ ನಡೆದ ಸ್ಥಳ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಇದ್ದ ಸ್ಥಳದಿಂದ ಘಟನೆ ನಡೆದ ಸ್ಥಳಕ್ಕೆ ಅಂದಾಜು 100 ಮೀಟರ ದೂರ ಇತ್ತು. ನಾನು 6 ನೇ ಮುಖ್ಯ ರಸ್ತೆಯಲ್ಲಿ ನಿಂತಿದ್ದೆ. ನಾನು ಇದ್ದ ಸ್ಥಳದಿಂದ ದ್ವಿಚಕ್ರ ವಾಹನ ಮತ್ತು ಬಿದ್ದಿದ್ದ ವ್ಯಕ್ತಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ ಕಾರಿನ ಬಲಭಾಗಕ್ಕೆ ಬಿದ್ದಿದ್ದ ದ್ವಿಚಕ್ರ ವಾಹನ ನಾನು ಇದ್ದ ಸ್ಥಳದಿಂದ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಕಾರಿನ ಪಕ್ಕದಲ್ಲಿ ದ್ವಿಚಕ್ರ ವಾಹನ ಬಿದ್ದಿತ್ತು ಅಪಘಾತ ನಂತರ ನಾನು ಸ್ಥಳದಲ್ಲಿ ಸುಮಾರು 4-5 ನಿಮಿಷ ಕಾಲ ಇದ್ದೆ. ಸದರಿ ರಸ್ತೆಯಲ್ಲಿ ವಾಹನ ಸಂಚಾರ ಇರಲಿಲ್ಲ ಮತ್ತು ಹೆಚ್ಚಿನ ಜನರು ಇರಲಿಲ್ಲ. ನಾನು ನೋಡಿದ ವೇಳೆಯಲ್ಲಿ ಅಕ್ಕಪಕ್ಕದ ಮನೆಯ ವ್ಯಕ್ತಿಗಳು ಹೊರಗಡೆ ಬಂದಿರಲಿಲ್ಲ. ವ್ಯಕ್ತಿ ಬಿದ್ದಿದ್ದ ಸ್ಥಳದ ಮನೆಯ ವ್ಯಕ್ತಿಗಳು ನಾನು ಇದ್ದ ವೇಳೆಯಲ್ಲಿ ಹೊರಗೆ ಬಂದಿರಲಿಲ್ಲ. ಘಟನೆ ಸ್ಥಳದ ಹತ್ತಿರದಲ್ಲಿ 2 ರಸ್ತೆಗಳಲ್ಲಿ ಸುಮಾರು 50 ಅಡಿ ಅಂತರದಲ್ಲಿ ಇದ್ದ ವ್ಯಕ್ತಿಗಳನ್ನು ನಾನು ನೋಡಿಲ್ಲ. ನಾನು ಇದ್ದ ಸ್ಥಳದಿಂದ 50 ಅಡಿ ಅಂತರದಲ್ಲಿ ಇದ್ದ ವ್ಯಕ್ತಿಗಳು ನನಗೆ ಕಾಣುತ್ತಿದ್ದರು ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳ ನಾನು ಇದ್ದ ಸ್ಥಳಕ್ಕೆ 50 ಅಡಿ ಅಂತರ ಇದೆ ಎಂದು ಗೊತ್ತಿಲ್ಲ. 6 ನೇ ಮುಖ್ಯ ರಸ್ತೆ 60-70 ಅಡಿ ಅಗಲ ಇದೆ ಎಂದರೆ ಸರಿಯಲ್ಲ. ಅಂದಾಜು 15-20 ಅಡಿ ಅಗಲ ಇದೆ. ನಾನು ಇದ್ದ ಸಮಯದಲ್ಲಿ ಬೇರೆ ವ್ಯಕ್ತಿಗಳು ಘಟನೆ ಸ್ಥಳಕ್ಕೆ ಬಂದಿಲ್ಲ.

2. ಕಾರಿನ ಹಿಂಭಾಗದಲ್ಲಿ ಆದ ಘಟನೆ ನಾನು ಇದ್ದ ಸ್ಥಳಕ್ಕೆ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಕೂಗಿಕೊಂಡು ಬೇರೆ ಜನರನ್ನು ಕರೆಯುವ ಪ್ರಯತ್ನ ಮಾಡಿಲ್ಲ. ನಾನು ಇದ್ದ ಸ್ಥಳದಿಂದ ಮುಂದೆ ಹೋಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ನೋಡಿದ್ದೇನೆ ಆತನಿಗೆ ತಲೆ ಮತ್ತು ಕೈಕಾಲುಗಳ ಮೇಲೆ ಗಾಯ ಆಗಿತ್ತು. ನಾನು ಗಾಯಾಳುವಿಗೆ ಊಪಚಾರ ಮಾಡಿಲ್ಲ. ಆರೋಪಿ ಶ್ರೀ ಸಂಜು ಅವರ ಕೈಯಲ್ಲಿ ಇದ್ದ ಮಚ್ಚು ಸ್ಥಳದಲ್ಲಿ ಬಿದ್ದಿದ್ದನ್ನು ನಾನು ನೋಡಿದ್ದೇನೆ. ಮಚ್ಚಿಗೆ ಮರದ ಹಿಡಿ ಇತ್ತು ಅಂದಾಜು 1 ವರೆ ಅಡಿ ಉದ್ದ ಇತ್ತು. ಮಚ್ಚಿಗೆ 2 ಕಡೆ ಹರಿತ ಇತ್ತು ಅಥವಾ ಒಂದು ಕಡೆ ಹರಿತ ಇತ್ತು ಎಂದು ನಾನು ನೋಡಿಲ್ಲ. ಮಚ್ಚು ನೋಡಿದ ಬಗ್ಗೆ ನಾನು ಪೋಲಿಸರಿಗೆ ಹೇಳಿದ್ದೇನೆ. ಗಾಯಗೊಂಡಿದ್ದ ವ್ಯಕ್ತಿ ನನಗೆ ಪರಿಚಯ ಇರಲಿಲ್ಲ. ಗಾಯಗೊಂಡಿದ್ದ ವ್ಯಕ್ತಿಯ ಬಳಿ ಮೊಬೈಲ್ ಇದ್ದ ಬಗ್ಗೆ ನಾನು ನೋಡಿಲ್ಲ. ನಾನು ನೋಡಿದ ವೇಳೆಯಲ್ಲಿ ಬೇರೆ ವ್ಯಕ್ತಿಗಳು ಘಟನೆಯನ್ನು ನೋಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಸಾಕಷ್ಟು ಜನ ಸಂಚಾರ ಇರುತ್ತದೆ ಎಂದರೆ ಸರಿಯಲ್ಲ.

3. ನ್ಯಾಯಾಲಯದ ಸಿಬ್ಬಂದಿ ಬಂದು ನನಗೆ ನ್ಯಾಯಾಲಯಕ್ಕೆ ಬರುವಂತೆ ಹೇಳಿದ್ದರು. ತನಿಖಾಧಿಕಾರಿ ಮುಂದೆ ನೀಡಿದ ಹೇಳಿಕೆಯಂತೆ ನ್ಯಾಯಾಧೀಶರ ಸಮಕ್ಷಮ ಹೇಳಿಕೆ ನೀಡಿದ್ದೇನೆ. ಗಾಯಗೊಂಡಿದ್ದ ವ್ಯಕ್ತಿ ರೌಡಿ ಶೀಟರ್ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಕರೆದ ಕಾರಣ ನಾನು ಪೋಲಿಸ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿದ್ದೇನೆ. ಘಟನೆ ನೋಡಿದ ಬಗ್ಗೆ ನಾನು ಪೋಲಿಸರಿಗೆ ಮೊದಲಿಗೆ ತಿಳಿಸಿರಲಿಲ್ಲ. ನಂತರದಲ್ಲಿ ನನ್ನನ್ನು ಪೋಲಿಸರು ಘಟನೆ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ಮರುದಿನ ಬೆಳಿಗ್ಗೆ ಟಿವಿಯಲ್ಲಿ ಮತ್ತು ಪತ್ರಿಕೆಯಲ್ಲಿ ನೋಡಿದಾಗ ಗಾಯಗೊಂಡಿದ್ದ ವ್ಯಕ್ತಿಯ ಹೆಸರು ಶ್ರೀ ಕೃಷ್ಣ ಎಂದು ತಿಳಿಯಿತು. ಘಟನೆ ನಂತರ ನಾನು ಅಪೋಲೊ ಆಸ್ಪತ್ರೆಗೆ ಹೋಗಿಲ್ಲ.

4. ಶ್ರೀ ಹವಾ ಮಾದೇಶ ಮತ್ತು ಸಹಚರರ ಪರಿಚಯ ಇಲ್ಲ. ಗಾಯಗೊಂಡಿದ್ದ ವ್ಯಕ್ತಿಯು ಧರಿಸಿದ್ದ ಬಟ್ಟೆಯ ಬಗ್ಗೆ ಸರಿಯಾಗಿ ಹೇಳಲು ಬರುವುದಿಲ್ಲ ಕಾರಣ ರಕ್ತದ ಕಲೆ ಆಗಿತ್ತು. ಗಾಯಗೊಂಡಿದ್ದ ವ್ಯಕ್ತಿಯು ಮೋರಿಯಲ್ಲಿ ಬಿದ್ದಿದ್ದ ಎಂದರೆ ಸರಿಯಲ್ಲ. ಸಾಕ್ಷಿದಾರರು ಘಟಪಾತ್ ಮಾುತ್ತ ಮೋರಿಯ ಮಧ್ಯ ಬಿದ್ದಿದ್ದ ಎಂದು ನುಡಿಯುತ್ತಾರೆ. ಕಾರು ಘಟಪಾತ್ ನಲ್ಲಿ ಇರಲಿಲ್ಲ.

**TYPED TO MY DICTATION IN THE OPEN COURT.**

***R. O. I. & A. C.,***

***IV ADJ & MACT.,***
***MYSORE.***